Crl Mis 288/2022 PW-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **05.11.2022** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ **KPN** ರವರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿಸಿ ಕೇಳಿ ತಿಳಿದುಕೊಂಡು ನನ್ನ ಸಹಿಯನ್ನು ಹಾಕಿರುತ್ತೇನೆ.

ತಹಶಿಲ್ದಾರ್ ಚಾಮರಾಜನಗರ ಇವರು ನೀಡಿರುವ ಅಲಭ್ಯ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ನಮ್ಮ ವಂಶವೃಕ್ಷ ಪ್ರಮಾಣ ಪತ್ರವನು ಹಾಜರುಮಾಡಿರುತ್ತೇನೆ, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ನನ್ನ ಆಧಾರ್ ಕಾರ್ಡನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ತಮ್ಮ ದಿನನಿತ್ಯ ಬದುಕಿಗೆ ನಿಪಿ-3 ರ ಅವಶ್ಯಕತೆ ಇರುವ ಕಾರಣ ಹಾಜರುಪಡಿಸಿರುವ ಅದರ ದೃಢೀಕೃತ ನಕಲನ್ನು ನಿಪಿ-3 ಕ್ಕೆ ತುಲನೆ ಮಾಡಿ ನೋಡಿ ಸರಿ ಬಂದ ಕಾರಣ ದೃಢೀಕೃತ ನಕಲನ್ನು ನಿಪಿ-3(ಎ) ಎಂದು ಗುರುತಿಸಿ ನಿಪಿ-3 ನ್ನು ಸಾಕ್ಷಿಗೆ ಮರಳಿ ನೀಡಲಾಯಿತು.

ನ್ಯಾಯಾಲಯದ ಆದೇಶದಂತೆ 2 ಪತ್ರಿಕ ಪ್ರಕಟಣೆಗಳನ್ನು ಹೊರಡಿಸಿರುತ್ತೇನೆ. ಸದರಿ ಪತ್ರಿಕೆಗಳನ್ನು ಹಾಜರು ಮಾಡಿರುತ್ತೇನೆ, ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

(ಪಾಟೀ ಸವಾಲುಃ ಎದುರುದಾರರು ಏಪಕ್ಷವಾದುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)

**ಪಾಟೀ ಸವಾಲುಃ ನ್ಯಾಯಾಲಯದಿಂದಃ**

ಮೃತ ಸಿದ್ದಲಿಂಗದೇವರು ನನ್ನ ಗಂಡನ ತಂದೆ. ಇವರ ಹೆಂಡತಿ ಹೆಸರು ಸಿದ್ದಲಿಂಗಮ್ಮ. ಸಿದ್ದಲಿಂಗದೇವರು ಇವರಿಗೆ 4 ಜನರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು. ಹೆಣ್ಣು ಮಕ್ಕಳ ಹೆಸರು ದೇವಮ್ಮ, ಪುಟ್ಟತಾಯಮ್ಮ, ಶಿವನಾಗಮ್ಮ ಮತ್ತು ರತ್ನಮ್ಮ ಹಾಗೂ ಗಂಡು ಮಕ್ಕಳ ಹೆಸರು ದೇವಣ್ಣ ಮತ್ತು ಸಿದ್ದಮಲ್ಲಪ್ಪ. ದೇವಮ್ಮ, ಪುಟ್ಟತಾಯಮ್ಮ, ಶಿವನಾಗಮ್ಮ, ರತ್ನಮ್ಮ, ಸಿದ್ದಮಲ್ಲಪ್ಪ ಇವರುಗಳು ಯಾರು ಬದುಕಿಲ್ಲ. ಇವರುಗಳಿಗೆ ಮದುವೆಯಾಗಿರುತ್ತದೆ ಹಾಗೂ ಇವರುಗಳಿಗೆ ಎಲ್ಲರಿಗೂ ಮಕ್ಕಳು ಇರುತ್ತಾರೆ. ನನಗೆ ಮಕ್ಕಳು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

05.11.2022.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.